


ಬಂಗಾಳಿ ಮೂಲ: ಶ್ರಾವಸ್ತಿ ಬಸು
ಕನ್ನಡಕ್ಕೆ: ನಾಗಮಣಿ ಎಸ್. ಎನ್.,
ಸರಸಿಜ್ ಆರ್.ಸಿ.

ಕಲೆ: ಡಿ.ಕೆ. ರಮೇಶ್

# ಬ್ಯೂಟಿ ಪಾರ್ಲರ್

ಕನ್ನಡಿಯಿಂದ ಆ ಹುಡುಗಿ ನನಗೆ ಸ್ಪಷ್ಟವಾಗಿ ಕಾಣಿಸುತ್ತಿದ್ದಳು. ಅವಳ ವಯಸ್ಸು ಹೆಚ್ಚು ಅಂದ್ರೆ ಹದಿನಾಲ್ಕೊ ಹದಿನೈದೋ ಅಥವಾ ಹದಿನಾರೂ ಇರಬಹುದು. ಅವಳ ಪಕ್ಕ ಹಳ್ಳಿಯ ಹೆಂಗಸೊಬ್ಬಳು ಕುಳಿತಿದ್ದಾಳೆ, ಅವಳ ಅಮ್ಮನಿರಬಹುದು, ಇಬ್ಬರಿಗೂ ಮುಖದಲ್ಲಿ ಹೋಲಿಕೆಯಿದೆ. ಅವಳ ಮುಖ ನಿರ್ವಿಕಾರವಾಗಿದೆ. ಕೋಪವೋ ದುಃಖವೋ ಒಂದೂ ಗೊತ್ತಾಗುತ್ತಿಲ್ಲ. ಆದರೆ, ಹುಡುಗಿ ಮಾತ್ರ ಕೋಪಗೊಂಡಿದ್ದಾಳೆ, ಅದರಲ್ಲಿ ಅನುಮಾನವೇ ಇಲ್ಲ. ಪಾರ್ಲರ್‌ನಲ್ಲಿರುವ ಇತರ ಹುಡುಗಿಯರ ಮಧ್ಯೆ ಒಂದು ರೀತಿಯ ಉದ್ವೇಗ ಮರೆಮಾಚಿದೆ. ಆದರೆ, ಯಾರೂ ಏನೂ ಮಾತಾಡುತ್ತಿಲ್ಲ. ಒಬ್ಬ ಸ್ಥೂಲಕಾಯದ ಮಹಿಳೆ ಕೌಂಟರ್‌ನಲ್ಲಿ ಕುಳಿತಿದ್ದಾಳೆ. ಅವಳೊಬ್ಬಳೇ ಮಾತನಾಡುತ್ತಿರುವವಳು, ಅವಳೇ ಪಾರ್ಲರ್‌ನ ಯಜಮಾನಿ ಇರಬಹುದು. ಅವಳ ಧ್ವನಿಯಲ್ಲಿನ ಅಸಹಾಯಕತೆ ಮತ್ತು ಗತ್ತು ಗಮನಿಸಿದ ನನಗೆ ಅವರ ಮಾತಿನ ಮೇಲೆ ಕುತೂಹಲವುಂಟಾಯಿತು. ಕಿವಿಗೊಟ್ಟು ಕೇಳಿಸಿಕೊಳ್ಳಲು ಶುರುಮಾಡಿದೆ. ಆದರೆ, ವಾಸ್ತವದಲ್ಲಿ ನಾನು ಕಿವಿಗೊಡಬೇಕಾಗಿಯೇ ಇರಲಿಲ್ಲ, ಆ ಯಜಮಾನಿಯ ಧ್ವನಿ ಕ್ರಮೇಣ ಏರತೊಡಗಿತು.